**ಓ.ಎಸ್.ನಂಬ್ರ: 323/2023 ಪಿ.ಡಬ್ಲ್ಯೂ :1**

ದಿನಾಂಕ:10-01-2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು

**ಪಾಟಿ ಸವಾಲು: ಶ್ರೀ ಹೆಚ್.ಎನ್.ಪಿ. ವಕೀಲರಿಂದ**

ದಾವೆ ದಾಖಲಿಸಲು ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಪ್ರತಿವಾದಿಗಳು ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸಿರುವುದು ನನಗೆ ಗೊತ್ತಿಲ್ಲ. ಪ್ರತಿವಾದಿ ದಾವೆಯಲ್ಲಿ ಏನು ಸಾಧನೆ ಮಾಡುತ್ತಿದ್ದಾರೆ ಎಂದು ವಕೀಲರ ಮೂಲಕ ತಿಳಿದುಕೊಂಡಿರುವುದಿಲ್ಲ.

2. ನನ್ನ ವಿರುದ್ದ ಪ್ರತಿವಾದಿ ಇನ್ನೊಂದು ದಾವೆ ದಾಖಲಿಸಿರುವುದು ಗೊತ್ತಿಲ್ಲ. ಪ್ರತಿವಾದಿ ಸಲ್ಲಿಸಿರುವ ದಾವೆಯಲ್ಲಿ ಪ್ರತಿವಾದಿ ನಿರ್ಭಂದಕಾದೇಶ ಪಡೆದುಕೊಂಡಿರುವುದು ಗೊತ್ತಿಲ್ಲ.

3. ಸರ್ವೇ ನಂಬ್ರ 103 ಸರಕಾರಿ ಸ್ಥಳ ಎಂದರೆ ಸರಿ. ಸದರಿ ಸರ್ವೇ ನಂಬ್ರ ನಲ್ಲಿ 44 ಸೆಂಟ್ಸ ಸ್ಥಳ ನನ್ನ ಸ್ವಾಧೀನದಲ್ಲಿ ಇದೆ. ಸದರಿ ಸರ್ವೇ ನಂಬ್ರ ನ ಉಳಿಕೆ ಅಂಶದ ಬಗ್ಗೆ ನನ್ನ ಆಕ್ಷೇಪ ಇರುವುದಿಲ್ಲ. ಸರ್ವೇ ನಂಬ್ರ 103/3ಬಿ 2 ರಲ್ಲಿ 30 ಸೆಂಟ್ಸ ಸ್ಥಳ ಪ್ರತಿವಾದಿಯ ಸ್ವಾಧೀನದಲ್ಲಿ ಇದೆ ಎಂದರೆ ನಾಗೇಶ್ ರವರ ಸ್ವಾಧೀನದಲ್ಲಿ ಇದೆ ಎಂದು ಸಾಕ್ಷಿಯು ನುಡಿಯುತ್ತಾರೆ. ಸದರಿ ವಿಚಾರವನ್ನು ದಾವೆಯಲ್ಲಿ ಹೇಳಿರುವುದಿಲ್ಲ.

4. ದಾವಾ ಸ್ಥಳವನ್ನು ಖರೀದಿ ಮಾಡಿರುತ್ತೇನೆ. ಯಾರಿಂದ ಖರೀದಿ ಮಾಡಿರುತ್ತೇನೆ ಎಂದು ನೆನಪಿಲ್ಲ. ಸಾಕ್ಷಿಯು ಮುಂದುವರಿದು ಶಿವಮನೆ ಮಲ್ಲರರವರಿಂದ ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಅವರಿಂದ ಖರೀದಿ ಮಾಡಿರುತ್ತೇನೆ ಎಂದು ವಕೀಲರಲ್ಲಿ ಹೇಳಿರುತ್ತೇನೆ. ಸದರಿ ವಿಚಾರವನ್ನು ನನ್ನ ವಕೀಲರು ವಾದ ಪತ್ರದಲ್ಲಿ ಬರೆದಿರುತ್ತಾರೆ. ಪ್ರತಿವಾದಿಯರ ತಂದೆಯ ಹೆಸರಿನಲ್ಲಿ ಸರ್ವೇ ನಂಬ್ರ 103/3ಬಿ 2 ರಲ್ಲಿ 30 ಸೆಂಟ್ಸ ಸ್ಥಳ ಇದೆ ಎಂದು ದಾವೆ ಸಲ್ಲಿಸುವಾಗ ನಾನು ವಕೀಲರಿಗೆ ಹೇಳಿರುವುದಿಲ್ಲ.

5. ನನ್ನ ಜಾಗದ ಉತ್ತರ ದಿಕ್ಕಿಗೆ ನಾರಾಯಣರವರ ಜಾಗ ಇದೆ. ಪೂರ್ವ ದಿಕ್ಕಿಗೆ ಸರಕಾರಿ ತೋಡು ಇದೆ. ಪೂರ್ವ ದಿಕ್ಕಿಗೆ ಸರಕಾರಿ ತೋಡು ಇದೆ ಎಂದು ವಕೀಲರಿಗೆ ಹೇಳಿರುತ್ತೇನೆ. ನನ್ನ ಜಾಗದ ದಕ್ಷಿಣ ದಿಕ್ಕಿಗೆ ಪ್ರತಿವಾದಿಯ 30 ಸೆಂಟ್ಸ ಜಾಗ ಇದೆ. ಪಶ್ಚಿಮ ದಿಕ್ಕಿಗೆ ದೇವರಾಜ ಶೇರುಗಾರರವರ ಜಾಗ ಇದೆ.

6. ಸರ್ವೇ ನಂಬ್ರ 103/3 ಬಿ 2 ರಲ್ಲಿ 30 ಸೆಂಟ್ಸ ಸ್ಥಳ ಪ್ರತಿವಾದಿಯ ತಂದೆಗೆ 1976-77 ನೇ ಇಸವಿಯಲ್ಲಿ ಮಂಜೂರಾಗಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ಸ್ಥಳದಲ್ಲಿ ಕೃಷಿ ಮಾಡಿಕೊಂಡು, ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಸಾಕ್ಷಿಯು ಆಗಿರಬಹುದು ಎಂದು ನುಡಿಯುತ್ತಾರೆ. ಸದರಿ ಆಸ್ತಿಯನ್ನು ಸುಬ್ರಾಯ ಶೇರಿಗಾರ ಅವರ ಮಗನಿಗೆ ಹಕ್ಕು ಬಿಡುಗಡೆ ಮಾಡಿಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬೈಂದೂರು**